OS : 107/2015
P.W-2

ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ

ದಿನಾಂಕಃ 09.11.2023 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನಗೆ ಪ್ರಕರಣದ ಬಗ್ಗೆ ವೈಯಕ್ತಿಕ ಮಾಹಿತಿ ಇದೆ. ವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ವಾದಿಯ ಕುಟುಂಬದ ಬಗ್ಗೆ ಗೊತ್ತು. ವಾದಿಯ ತಂದೆಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ವಾದಿಯರಿಗೆ ಇಬ್ಬರು ಅಕ್ಕತಂಗಿ ಇದ್ದಾರೆ ಎಂದರೆ ಸರಿಯಲ್ಲ. ಒಬ್ಬರು ತಂಗಿ ಇರುತ್ತಾರೆ ಅವರ ಹೆಸರು ಕೆಂಚಮ್ಮ. ವಾದಿಯ ಮತ್ತೊಬ್ಬ ಸಹೋದರಿ ದೇವೀರಮ್ಮ ಎಂದು ಇದ್ದಾರೆ ಎಂದರೆ ಸರಿಯಲ್ಲ. ಅವರನ್ನು ಬಡೆಲಡುಕು ಗ್ರಾಮಕ್ಕೆ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ತಂದೆ ಹೆಸರು ಸಣ್ಣ ಸಿದಪ್ಪ ಎಂದರೆ ಸರಿಯಲ್ಲ. ದೊಡ್ಡ ಸಿದಪ್ಪ ಎಂದರೆ ಸರಿ. ಸಿದಲಿಂಗಮ್ಮ ನವರ ಗಂಡನ ಹೆಸರು ಕುರುಬರ ಬಸಪ್ಪ. ಸದರಿಯವರಿಗೆ 8 ಜನ ಅಣ್ಣತಮ್ಮಂದಿರು ಇರುತ್ತಾರೆ ಎಂದರೆ ಗೊತ್ತಿಲ್ಲ. ಆತ ಕೊಟ್ರಪ್ಪನ ಹಿರಿಯ ಮಗ ಎಂದರೆ ನನಗೆ ಗೊತ್ತಿಲ್ಲ. ನಾನು ರಿಯಲ್ ಎಸ್ಟೇಟ ವ್ಯವಹಾರು ಮಾಡುತ್ತೇನೆ ಎಂದರೆ ಸರಿ. ಕಳೆದ 40 ವರ್ಷಗಳಿಂದ ವಾದಿ ಗೊತ್ತು. ವಾದಿಯ ಮದುವೆ ಯಾವಾಗಾಯಿತೆಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪತ್ರ ಬರೆಯಲು ನಾನೆ ಮಾಹಿತಿ ಕೊಟ್ಟಿದ್ದೇನೆ . ವಾದಿ ತಂದೆ ಹೆಸರಿನಲ್ಲಿ ಯಾವ ಆಸ್ತಿ ಇದ್ದವು ಎಂದು ನನಗೆ ಗೊತ್ತಿಲ್ಲ. ವಾದಿ ತನ್ನ ತಂದೆಯಿಂದ ಬಂದ ಆಸ್ತಿಯನ್ನು ಯಾರು ಯಾರಿಗೆ ಮಾರಾಟ ಮಾಡಿದ್ದಾರೆಂದು ಗೊತ್ತಿಲ್ಲ. ವಾದಿಯು ದಾವಾ ಆಸ್ತಿಯನ್ನು ಯಾವಾಗ ಖರೀದಿ ಮಾಡಿದ್ದರೆಂದು ಹೇಳಲು ನನಗೆ ನೆನಪಿಲ್ಲ. ದಾವಾ ಆಸ್ತಿಯ ಖರೀದಿ ಪತ್ರವನ್ನು ಈಗ್ಗೆ 12 ವರ್ಷಗಳ ಹಿಂದೆ ನೋಡಿದ್ದೇನೆ. ಸದರಿ ಖರೀದಿ ಪತ್ರವನ್ನು ಯಾರು ಬರೆದಿದ್ದಾರೆ ಯಾರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಸದರಿ ಖರೀದಿ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿಲ್ಲ ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಪೂರ್ವ ಭಾಗಕ್ಕೆ ನನ್ನ ಜಮೀನು ಇದೆ. ದಾವಾ ಆಸ್ತಿಯ ಪೂರ್ವಕ್ಕೆ ದತ್ತಣ್ಣ ಶೆಟ್ಟಿಯ ಹೊಲ ಇದೆ ಎಂದರೆ ಸರಿ. ದತ್ತಣ್ಣ ಶೆಟ್ಟಿಯ ಹೊಲದ ಪೂರ್ವಕ್ಕೆ ದೊಂಬರ ಅಜ್ಜಯ್ಯರ ಹೊಲ ಇದೆ ಎಂದರೆ ಸರಿ. ದಾವಾ ಆಸ್ತಿಯನ್ನು ಕೊಟ್ರಪ್ಪನ ಮಕ್ಕಳು ಒಟ್ಟು ಕುಟುಂಬದಲ್ಲಿ ಖರೀದಿ ಆಸ್ತಿ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಮಾಹಿತಿ ಇಲ್ಲದಿದ್ದರೂ ವಾದಿಯ ಮಗ ನನ್ನ ಸ್ನೇಹಿತನಾಗಿದ್ದರಿಂದ ಅವರಿಗೆ ಸಹಾಯ

ಮಾಡಲು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಕಳೆದ 50 ವರ್ಷಗಳಿಂದ ಪ್ರತಿವಾದಿಯ ತಂದೆ ದಾವಾ ಆಸ್ತಿಯ ಅರ್ಧ ಭಾಗದಲ್ಲಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಿಸಿದಂತೆ ವಾದಿ ಮತ್ತು ವಾದಿ ಗಂಡ ಪ್ರತಿವಾದಿಗೆ ನೊಂದಾಯಿತವಲ್ಲದ ಪಾಲು ವಿಭಾಗವನ್ನು ದಿಃ 2.4.2013 ರಂದು ಬರೆದುಕೊಟಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಂತೆ ಪ್ರತಿವಾದಿಯ ಹೆಸರಿಗೆ ಖಾತೆ ಬರುತಿದೆ ಎಂದರೆ ನಾನು ಪಹಣಿಗಳನ್ನು ನೋಡಿಲ್ಲ. ದಾವಾ ಆಸ್ತಿಯ ಬೆಲೆ ಹೆಚ್ಚಾಗಿದ್ದರಿಂದ ನಾನು ವಾದಿ ಪರವಾಗಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ.)
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

ಓ,ಹೇ,ಕೇ,ಸರಿ ಇದೆ,

ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ಕೂಡ್ಲಿಗಿ.